ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿಕೆ । ಪುರಭವನದಲ್ಲಿ 'ವಿಶ್ವವಾಣಿ ಪುಸ್ತಕ' ಪ್ರಕಾಶನದ 6 ಪುಸ್ತಕ ಬಿಡುಗಡೆ

# ಪ್ರಾಯೋಜಕತ್ವ ಹೆಚ್ಚಳವಾದರೆ ಸಾಹಿತ್ಯದ ಗುಣಮಟ್ಟ ಕುಸಿತ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಾಹಿತ್ಯ ಬೆಳವಣಿಗೆಗೆ ಸರ್ಕಾರವು ಪ್ರಾಯೋಜಕತ್ವ ಹೆಚ್ಚಳ ಮಾಡಿದಂತೆ ಸಾಹಿತ್ಯದ ಗುಣಮಟ್ಟ ಕಡಿಮೆಯಾಗಲಿದೆ. ಹೀಗಾಗಿ, ಉತ್ತಮ ಬರಹಗಾರರ ತಂಡ ಬಹಳ ಮುಖ್ಯ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಪುರಭವನದಲ್ಲಿ ಶನಿವಾರ 'ವಿಶ್ವವಾಣಿ ಪುಸ್ತಕ' ಪ್ರಕಟಿಸಿರುವ 6 ಪುಸ್ತಕಗಳ ಬಿಡುಗಡೆ ಮಾಡಿ ಮಾತನಾಡಿದ ಅವರು, ಪುಸ್ತಕೋದ್ಯಮಕ್ಕೆ ದುಡ್ಡಿನ ಬರ ಬಂದಿಲ್ಲ. ಓದುಗರು ಪುಸ್ತಕ ಖರೀದಿಸಿ ಆ ಹಣ ಸಾಹಿತಿಗಳಿಗೆ ತಲುಪಿಸಿ ಅದು ಮತ್ತೆ ಸಾಹಿತ್ಯಕ್ಕೆ ವಿನಿಯೋಗವಾಗುವ ತನಕ ಪುಸ್ತಕೋದ್ಯಮವು ಕಷ್ಟದಲ್ಲಿಯೇ ಇರಲಿದೆ ಎಂದರು. 200 ಪುಟದ ಸಾಹಿತ್ಯಕ್ಕೆ ಸರ್ಕಾರ 1 ಲಕ್ಷ ರೂ. ನೀಡಿದರೆ, ವರ್ಷಕ್ಕೆ 5-6 ಪುಸ್ತಕ ಬರೆಯುವ ಸಾಹಿತಿಗಳು ಹುಟ್ಟಿಕೊಳ್ಳುತ್ತಾರೆ. ಹೀಗಾಗಿ, ಸಮಾಜ, ಸರ್ಕಾರ ಮತ್ತು ಸಾಹಿತಿಗಳು ಪರಸ್ಪರ ಬೆಂಬಲಿಸುವ ವಾತಾವರಣ ನಿರ್ಮಾಣವಾದಾಗ ಓದುಗರಿಗೂ ಲಾಭವಾಗಲಿದೆ ಎಂದರು.

**ಬೈಯೋಕಾದ್ರೂ ರಾಜಕಾರಣಿಗಳು ಬೇಕು:** ಪತ್ರಿಕೆ ಮತ್ತು ರಾಜಕಾರಣ ಪರಸ್ಪರ ಬೇಕೇ ಬೇಕು. ರಾಜಕಾರಣಿಗಳಿಗೆ ಬೈಯುವುದಕ್ಕಾದರೂ, ಪತ್ರಿಕೆಗಳಿಗೆ ರಾಜಕೀಯ ಬರೆಯುವುದಕ್ಕಾದರೂ ರಾಜಕೀಯ ಬೇಕು. ರಾಜಕಾರಣಿಗಳು ತುಂಬ ಭ್ರಮೆಯಲ್ಲಿರುತ್ತೇವೆ. ಆದರೆ, ಜನರಿಗೆ ಸತ್ಯ ಯಾವುದು, ಸುಳ್ಳು ಯಾವುದು ಎಂಬುದು ಸರಿಯಾಗಿ ತಿಳಿದಿರುತ್ತದೆ. ಮಾತನಾಡುವವರಿಗಿಂತ ಕೇಳಿಸಿಕೊಳ್ಳುವವರು, ಬರೆಯುವವರಿಂತ ಓದುಗರು ಬುದ್ಧಿವಂತರು ಎಂದುಕೊಂಡಾಗ ಬರವಣಿಗೆ ಅರ್ಥಪೂರ್ಣವಾಗಿರುತ್ತದೆ ಎಂದರು. ಮುಂದಿನ 25 ವರ್ಷಗಳಲ್ಲಿ ಭಾರತ ಹೇಗಿರಲಿದೆ ಮತ್ತು ಹೇಗಿರಬೇಕು ಎಂಬ ಸಾಹಿತ್ಯ ಪ್ರಕಟವಾದರೆ ಬೆಲೆ ಬರಲಿದೆ. ವಿಶ್ವೇಶ್ವರ ಭಟ್ ಅವರಲ್ಲಿ ಅಂತಹ ಕೌಶಲವನ್ನು ಕಂಡಿದ್ದೇನೆ ಎಂದು ಹೇಳಿದರು.

**ಬಿಡುಗಡೆಯಾದ ಕೃತಿಗಳು:** ವಿಶ್ವೇಶ್ವರ ಭಟ್ ಅವರ ಸಂಪಾದಕತ್ವದ 'ಸತ್ಯಶೋಧನೆ' ಮೂರು ಭಾಗಗಳು, ರೂಪಾ ಗುರುರಾಜ್ ಅವರ 'ಒಂದೊಳ್ಳೆ ಮಾತು', ಕಿರಣ್ ಉಪಾಧ್ಯಾಯ ಅವರ 'ಹೊರ ದೇಶವಾಸಿ', ಶಿಶಿರ್ ಹೆಗಡೆ ಅವರ 'ಶಿಶಿರ ಕಾಲ' ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೃತಿಕಾರರಾದ ರೂಪಾ ಗುರು ರಾಜ್, ಶಿಶಿರ ಹೆಗಡೆ ಮತ್ತು ಕಿರಣ್ ಉಪಾಧ್ಯಾಯ ಮತ್ತಿತರರಿದ್ದರು.

ವಿಜಯವಾಣಿ ಚಿತ್ರ



ಪುರಭವನದಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ 'ವಿಶ್ವವಾಣಿ ಪುಸ್ತಕ' ಪ್ರಕಾಶನದ 6 ಕೃತಿಗಳನ್ನು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ಪ್ರದೀಪ್ ಈಶ್ವರ್, 'ವಿಶ್ವವಾಣಿ' ದಿನಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮತ್ತಿತರರು ಉಪಸ್ಥಿತರಿದ್ದರು.

## ಹಾಲಿ- ಮಾಜಿ ಸಿಎಂಗಳನ್ನು ಕರೆದಿದ್ದೇಕೆ?

ರಾಜ್ಯದ ಪುಸ್ತಕೋದ್ಯಮ ಕಷ್ಟದ ಸ್ಥಿತಿಗೆ ತಲುಪಿದೆ. 6.5 ಕೋಟಿ ಕನ್ನಡಿಗರಿದ್ದರೂ ಸಾವಿರ ಪುಸ್ತಕಗಳು ಮಾರಾಟವಾಗುವುದು ದುಸ್ತರ ಎಂಬ ಮಾತಿದೆ. ರಾಜ್ಯದಲ್ಲಿ 42 ಪುಸ್ತಕದ ಅಂಗಡಿಗಳಿವೆ. ಆದರೆ, 24 ಸಾವಿರ ಮದ್ಯದ ಅಂಗಡಿಗಳಿವೆ! ಸರ್ಕಾರದ ಎಲ್ಲ ಯೋಜನೆಗಳು ನಿಂತಿರುವುದು ಬಾರ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ಎಂಬುದು ದುರ್ದೈವ. ಈ ವಿಷಯವನ್ನು ಹಾಲಿ ಮತ್ತು ಮಾಜಿ ಮುಖ್ಯಮಂತ್ರಿಗಳಿಗೆ ತಿಳಿಸಬೇಕು ಎಂಬ ಉದ್ದೇಶದಿಂದ ಇಬ್ಬರನ್ನೂ ಆಹ್ವಾನಿಸಿದ್ದೆ. ಆದರೆ, ಕೆಲವು ಅನಿವಾರ್ಯ ಕಾರಣಗಳಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಬರಲಾಗಲಿಲ್ಲ ಎಂದು 'ವಿಶ್ವವಾಣಿ' ದಿನಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹೇಳಿದರು.

## ಅಪ್ಪ-ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳಿ

ಯುವಕರಿಗೆ ಯಾರಾದರೂ ರಾಜಕೀಯ ನಾಯಕರು ಇಷ್ಟವಾದರೆ ಬೇರೆ ನಾಲ್ಕು ಜನರಿಗೆ ಹೇಳಿ ಮತ ಹಾಕಿಸಿ. ಆದರೆ, ಯಾವುದೇ ಕಾರಣಕ್ಕೂ ನಮ್ಮ ಹಿಂದೆ ಬರಬೇಡಿ. ಏಕೆಂದರೆ, ರಾಜಕಾರಣಿಗಳು ತಮ್ಮ ಭವಿಷ್ಯದ ಬಗ್ಗೆ ಮಾತ್ರ ಯೋಚಿಸುತ್ತಾರೆ ಎಂದು ಶಾಸಕ ಪ್ರದೀಪ್ ಈಶ್ವರ್ ಹೇಳಿದರು. ಬದುಕಿನಲ್ಲಿ ಸಾಕಷ್ಟು ಏಟು ತಿಂದವನಾಗಿ ಈ ಮಾತು ಹೇಳುತ್ತಿದ್ದೇನೆ. ನಾಳೆ ನನಗಿಂತಲೂ ಮತ್ತೊಬ್ಬ ಉತ್ತಮವಾದವನು ಬಂದರೆ ನಾನು ಸೋಲಬಹುದು. ಆದ್ದರಿಂದ ನಾನು ಯುವಕರಿಗೆ ಹೇಳುವುದೇನೆಂದರೆ, ಅಪ್ಪ-ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳಿ. ನಾಯಕರ ಹಿಂದೆ ಸುತ್ತಬೇಡಿ ಎಂದು ಸಲಹೆ ನೀಡಿದರು.